# 2001ರ ಕರ್ನಾಟಕ ಅಧಿನಿಯಮ ಸಂಖ್ಯೆ: 1

# ಕರ್ನಾಟಕ ಗ್ರಾಮೀಣ ಅಭ್ಯರ್ಥಿಗಳಿಗಾಗಿ ( ರಾಜ್ಯ ಸಿವಿಲ್ ಸೇವೆಗಳಲ್ಲಿ ) ನೇಮಕಾತಿಗಳ ಅಥವಾ ಹುದ್ದೆಗಳ ಮೀಸಲಾತಿ ಅಧಿನಿಯಮ, 2000.

## ಪ್ರಕರಣಗಳ ಪಟ್ಟಿ

ಪ್ರಕರಣಗಳು:


1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ
2. ಪರಿಭಾಷೆಗಳು
3. ಗ್ರಾಮೀಣ ಅಭ್ಯರ್ಥಿಗಳಿಗಾಗಿ ನೇಮಕಾತಿಗಳ ಅಥವಾ ಹುದ್ದೆಗಳ ಮೀಸಲಾತಿ
4. ನಿಯಮಗಳ ರಚನಾಧಿಕಾರ
5. ತೊಂದರೆಗಳನ್ನು ನಿವಾರಿಸಲು ಅಧಿಕಾರ


## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಗ್ರಾಮೀಣ ಅಭ್ಯರ್ಥಿಯು ಪಡೆದುಕೊಂಡ ಅಂಕಗಳ ಶೇಕಡಾ ಪ್ರಮಾಣಕ್ಕೆ ಶೇಕಡಾ ಹತ್ತರಷ್ಟು ಹೆಚ್ಚಿನ ಅಂಕಗಳನ್ನು ನೀಡುವುದಕ್ಕಾಗಿ ಅಧಿಸೂಚನೆ ಸಂಖ್ಯೆ ಡಿಪಿಎಆರ್ 59 ಎಸ್ಆರ್ಆರ್ 96, ದಿನಾಂಕ 28ನೇ ಏಪ್ರಿಲ್ 1997ರ ಮೂಲಕ ಕರ್ನಾಟಕ ಸಿವಿಲ್ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು, 1977ಕ್ಕೆ ಮಾಡಲಾದ ತಿದ್ದುಪಡಿಯನ್ನು, ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ 13157/98 ರಲ್ಲಿ ಪ್ರಶ್ನಿಸಲಾಯಿತು ಮತ್ತು ಸಂಬಂಧಪಟ್ಟ ಉಪಬಂಧವು ಅನೂರ್ಜಿತವೆಂದು ಮತ್ತು 14,15 ಮತ್ತು 16ನೇ ಅನುಚ್ಛೇದಗಳನ್ನು ಉಲ್ಲಂಘಿಸುತ್ತದೆಂದು ಘೋಷಿಸಿತು. ರಾಜ್ಯ ಸರ್ಕಾರವು ವಿಭಾಗೀಯ ನ್ಯಾಯಪೀಠಕ್ಕೆ ಸಲ್ಲಿಸಿದ ಅಪೀಲನ್ನು ಆ ನ್ಯಾಯಪೀಠವು ವಜಾ ಮಾಡಿತು. ರಾಜ್ಯ ಸರ್ಕಾರವು ಸರ್ವೋಚ್ಚ ನ್ಯಾಯಾಲಯಕ್ಕೆ ಸಲ್ಲಿಸಿದ ವಿಶೇಷ ಅನುಮತಿ ಅರ್ಜಿಯನ್ನು ಸರ್ವೋಚ್ಚ ನ್ಯಾಯಾಲಯವು ಕೂಡಾ ವಜಾಮಾಡಿತು.

ರಾಜ್ಯ ಸರ್ಕಾರವು, ಗ್ರಾಮೀಣ ಅಭ್ಯರ್ಥಿಗಳಿಗೆ ಸಂಬಂಧಪಟ್ಟ ವಿವಿಧ ಅಂಶಗಳನ್ನು ಪರಿಶೀಲಿಸುವದಕ್ಕಾಗಿ ಉಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಾಧೀಶರಾದ ನ್ಯಾಯಮೂರ್ತಿ ಆರ್.ರಾಮಕೃಷ್ಣ ಅವರ ಅಧ್ಯಕ್ಷತೆಯಲ್ಲಿ ಮತ್ತು ಇತರ ಏಳು ಸದಸ್ಯರನ್ನು ಒಳಗೊಂಡ ಒಂದು

ವಿಚಾರಣಾ ಆಯೋಗವನ್ನು ರಚಿಸಿತು ಮತ್ತು ಆಯೋಗವು, ಈಗ ಇರುವ ಶೇಕಡಾ 50 ರಷ್ಟು ಮೀಸಲಾತಿಗೆ ಹೆಚ್ಚಿಗೆಯಾಗಿ ಶೇಕಡಾ 5 ರಷ್ಟು ಮೀಸಲಾತಿಯನ್ನು ನೀಡುವಂತೆ ಮತ್ತು ಈ ಸಂಬಂಧದಲ್ಲಿ ಒಂದು ಕಾನೂನನ್ನು ರಚಿಸುವಂತೆ ಶಿಫಾರಸು ಮಾಡಿ ವರದಿಯನ್ನು ಸಲ್ಲಿಸಿತು.

ವರದಿಯಲ್ಲಿ ಮಾಡಿದ ಶಿಫಾರಸುಗಳನ್ನು ಮತ್ತು ಎಲ್ಲ ಇತರ ವಿಷಯಗಳನ್ನು ಜಾಗರೂಕತೆಯಿಂದ ಪರಿಶೀಲಿಸಿದ ತರುವಾಯ ಸರ್ಕಾರವು, ಜನರಲ್ ಮೆರಿಟ್‌ನ ಪ್ರತಿಯೊಂದು ಪ್ರವರ್ಗದಲ್ಲಿ, ಅನುಸೂಚಿತ ಜಾತಿ, ಅನುಸೂಚಿತ ಪಂಗಡಗಳು ಮತ್ತು ಇತರ ಹಿಂದುಳಿದ ವರ್ಗಗಳ ಪ್ರತಿಯೊಂದು ಪ್ರವರ್ಗದಲ್ಲಿ, ನೇರ ನೇಮಕಾತಿಯಲ್ಲಿ ಖಾಲಿ ಸ್ಥಾನಗಳ ಶೇಕಡಾ 10ರಷ್ಟರವರೆಗೆ ಸಮಾಂತರ ಮೀಸಲಾತಿಯನ್ನು ನೀಡಲು ಉಪಬಂಧ ಕಲ್ಪಸುವುದು ಅವಶ್ಯಕವೆಂದು ಪರಿಗಣಿಸಿತು.

ಆದ್ದರಿಂದ ಈ ವಿಧೇಯಕ.

(2000 ರ ವಿಧಾನ ಸಭೆಯ ವಿಧೇಯಕ ಸಂಖ್ಯೆ: 35 ಕಡತ ಸಂಖ್ಯೆ: ಸಂವ್ಯಶಾಇ 59 ಶಾಸನ 2000)

## 2001ರ ಕರ್ನಾಟಕ ಅಧಿನಿಯಮ ಸಂಖ್ಯೆ: 1

*(2001ನೇ ಜನವರಿ ಆರನೇ ದಿನಾಂಕದಂದು ಕರ್ನಾಟಕ ರಾಜ್ಯ ಪತ್ರದ ವಿಶೇಷ ಸಂಚಿಕೆಯಲ್ಲಿ ಪ್ರಕಟವಾಗಿದೆ)*

# ಕರ್ನಾಟಕ ಗ್ರಾಮೀಣ ಅಭ್ಯರ್ಥಿಗಳಿಗಾಗಿ ( ರಾಜ್ಯ ಸಿವಿಲ್ ಸೇವೆಗಳಲ್ಲಿ ) ನೇಮಕಾತಿಗಳ ಅಥವಾ ಹುದ್ದೆಗಳ ಮೀಸಲಾತಿ ಅಧಿನಿಯಮ, 2000.

*(2001ನೇ ಜನವರಿ ನಾಲ್ಕನೇ ದಿನಾಂಕದಂದು ರಾಜ್ಯಪಾಲರ ಅನುಮತಿಯನ್ನು ಪಡೆಯಲಾಗಿದೆ)*

ಗ್ರಾಮೀಣ ಅಭ್ಯರ್ಥಿಗಳಿಗಾಗಿ ( ರಾಜ್ಯ ಸಿವಿಲ್ ಸೇವೆಗಳಲ್ಲಿ ) ನೇಮಕಾತಿಗಳ ಅಥವಾ ಹುದ್ದೆಗಳ ಮೀಸಲಾತಿಗಾಗಿ ಉಪಬಂಧ ಕಲ್ಪಿಸಲು ಒಂದು ಅಧಿನಿಯಮ.

ಸರ್ಕಾರವು ಅಧಿಸೂಚನೆ ಸಂಖ್ಯೆ ಡಿಪಿಎಆರ್ 5 ಎಸ್‌ಎಸ್‌ಆರ್ 92, ದಿನಾಂಕ 31ನೇ ಮಾರ್ಚ್ 1992ರ ಮೂಲಕ ರಾಜ್ಯ ಸಿವಿಲ್ ಸೇವೆಗಳಲ್ಲಿ ಸಮೂಹ ‘ ಸಿ ’ ಮತ್ತು ಸಮೂಹ ‘ ಡಿ ’ ಗಳ ಹುದ್ದೆಗಳಿಗೆ ನೇರ ನೇಮಕಾತಿಯ ಉದ್ದೇಶಕ್ಕಾಗಿ ಗ್ರಾಮೀಣ ಅಭ್ಯರ್ಥಿಗಳು ಪಡೆದುಕೊಂಡ ಒಟ್ಟು ಅಂಕಗಳಿಗೆ ಹೆಚ್ಚುವರಿಯಾಗಿ ಹದಿನೈದು ಅಂಕಗಳ ರೂಪದಲ್ಲಿ ಅವರಿಗೆ ವೈಟೇಜ್ ನೀಡಿಕೆಗಾಗಿ ಕರ್ನಾಟಕ ಸಿವಿಲ್ ಸೇವಾ ( ಸಾಮಾನ್ಯ ನೇಮಕಾತಿ ) ನಿಯಮಗಳು, 1977 ರಲ್ಲಿ 3ಬಿ ಹೊಸ ನಿಯಮದ ಸೇರ್ಪಡೆ ಮಾಡಿತು ಮತ್ತು ಅದರಲ್ಲಿ ಗ್ರಾಮೀಣ ಅಭ್ಯರ್ಥಿಎಂಬುದನ್ನು 1981 ರ ಜನಗಣತಿಯ ಪ್ರಕಾರ 20,000 ಕ್ಕಿಂತ ಕಡಿಮೆ ಜನಸಂಖ್ಯೆ ಇರುವ ಗ್ರಾಮೀಣ ಪ್ರದೇಶಗಳಲ್ಲಿ ಇರುವ ಯಾವುವೇ ಶಾಲೆಗಳಲ್ಲಿ ವ್ಯಾಸಂಗ ಮಾಡಿದ ಮತ್ತು ಸೆಕೆಂಡರಿ ಸ್ಕೂಲ್ ಲೀವಿಂಗ್ ಸರ್ಟಿಫಿಕೇಟ್ ಪರೀಕ್ಷೆಯಲ್ಲಿ ಉತ್ತೀರ್ಣನಾದ ಒಬ್ಬ ವ್ಯಕ್ತಿಯೆಂದು ಪರಿಭಾಷಿಸಿರುವುದರಿಂದ;

ಮೇಲ್ಕಂಡ ಉಪಬಂಧವನ್ನು ಕಾಲಕಾಲಕ್ಕೆ ಮಾರ್ಪಾಡು ಮಾಡಲಾಯಿತು ಮತ್ತು ಅಧಿಸೂಚನೆ ಸಂಖ್ಯೆ ಡಿಪಿಎಆರ್ 59 ಎಸ್‌ಆರ್‌ಆರ್ 96, ದಿನಾಂಕ 28ನೇ ಏಪ್ರಿಲ್ 1997ರ ಮೂಲಕ ಸದರಿ ವೈಟೇಜ್‌ನ್ನು ಗ್ರಾಮೀಣ ಅಭ್ಯರ್ಥಿಯು ಪಡೆದುಕೊಂಡ ಅಂಕಗಳ ಶೇಕಡಾವಾರಿಗೆ ಹೆಚ್ಚುವರಿ ಶೇಕಡಾ ಹತ್ತನ್ನು ಸೇರಿಸಲು ಮಾರ್ಪಡಿಸಲಾಯಿತು ಮತ್ತು ಇದನ್ನು ಸಮೂಹ ‘ಎ’ ಮತ್ತು ಸಮೂಹ ‘ ಬಿ ’ ಹುದ್ದೆಗಳ ನೇರ ನೇಮಕಾತಿಯ ಉದ್ದೇಶಕ್ಕಾಗಿಯೂ ಸಹ ವಿಸ್ತರಿಸಲಾಯಿತು ಮತ್ತು ‘ಗ್ರಾಮೀಣ ಅಭ್ಯರ್ಥಿ’ ಎಂಬ ಪದಾವಳಿಯನ್ನು, ಕರ್ನಾಟಕ ರಾಜ್ಯದಲ್ಲಿ,-

---

ಕರ್ನಾಟಕ ರಾಜ್ಯ ಪತ್ರದ ಭಾಗ-IVಎ ವಿಶೇಷ ಪತ್ರಿಕೆ ಸಂಖ್ಯೆ: 18 ದಿನಾಂಕ: 6.1.2001 ರಲ್ಲಿ ಪ್ರಕಟಿತ ಕಡತ ಸಂಖ್ಯೆ: ಸಂವ್ಯಶಾಇ 59 ಶಾಸನ 2000.

(i) ಒಂದು ಹುದ್ದೆಗಾಗಿ ನಿಯಮಿಸಲಾದ ಅರ್ಹತಾ ಪರೀಕ್ಷೆಯು ಎಸ್.ಎಸ್.ಎಲ್.ಸಿ ಅಥವಾ ಉನ್ನತ ಪರೀಕ್ಷೆಯಾಗಿದ್ದಲ್ಲಿ ಒಂದನೇ ತರಗತಿಯಿಂದ ಹತ್ತನೇ ತರಗತಿಯವರೆಗೆ, ಅಥವಾ

(ii) ಒಂದು ಹುದ್ದೆಗಾಗಿ ನಿಯಮಿಸಲಾದ ಅರ್ಹತಾ ಪರೀಕ್ಷೆಯು ಎಸ್.ಎಸ್.ಎಲ್.ಸಿ ಗಿಂತ ಕಡಿಮೆಯಾಗಿದ್ದಲ್ಲಿ ಒಂದನೇ ತರಗತಿಯಿಂದ ಅರ್ಹತಾ ಪರೀಕ್ಷೆಯವರೆಗೆ,

- 1999 ರ ಜನಗಣತಿಯ ಪ್ರಕಾರ 50,000ಕ್ಕಿಂತ ಕಡಿಮೆ ಜನಸಂಖ್ಯೆ ಇರುವ ಪ್ರದೇಶದಲ್ಲಿರುವ ಅಥವಾ ಪಟ್ಟಣದಲ್ಲಿರುವ ಶಾಲೆಯಲ್ಲಿ ವ್ಯಾಸಂಗ ಮಾಡಿದ ಒಬ್ಬ ವ್ಯಕ್ತಿ ಎಂದು ಪರಿಭಾಷಿಸಿರುವುದರಿಂದ;

ಮೇಲ್ಕಂಡ ತಿದ್ದುಪಡಿಯನ್ನು ಕರ್ನಾಟಕ ಉಚ್ಚ ನ್ಯಾಯಾಲಯದಲ್ಲಿ ರಿಟ್ ಅರ್ಜಿ ಸಂಖ್ಯೆ 13197/98ರಲ್ಲಿ ಪ್ರಶ್ನಿಸಲಾಯಿತು ಮತ್ತು ಗ್ರಾಮೀಣ ಅಭ್ಯರ್ಥಿಗಳಿಗಾಗಿ ಉಪಬಂಧ ಕಲ್ಪಿಸುವ ಕರ್ನಾಟಕ ಸಿವಿಲ್ ಸೇವಾ (ಸಾಮಾನ್ಯ ನೇಮಕಾತಿ) ನಿಯಮಗಳು, 1977ರ ಸದರಿ 3ಬಿ ನಿಯಮವು ಅನೂರ್ಜಿತವೆಂದು ಮತ್ತು 14,15 ಮತ್ತು 16ನೇ ಅನುಚ್ಛೇದಗಳನ್ನು ಉಲ್ಲಂಘಿಸುತ್ತದೆಂದು ಮಾನ್ಯ ಏಕ ಸದಸ್ಯ ನ್ಯಾಯಪೀಠದ ನ್ಯಾಯಮೂರ್ತಿಯವರು ಘೋಷಿಸಿರುವುದರಿಂದ;

ರಾಜ್ಯ ಸರ್ಕಾರವು ವಿಭಾಗೀಯ ನ್ಯಾಯ ಪೀಠಕ್ಕೆ ಸಲ್ಲಿಸಿದ ಅಪೀಲನ್ನು ಆ ನ್ಯಾಯಪೀಠವು 26.11.1999ನೇ ದಿನಾಂಕದ ತನ್ನ ತೀರ್ಪಿನ ಮೂಲಕ ವಜಾ ಮಾಡಿತು ಮತ್ತು ಆದರ ವಿರುದ್ಧ ಸರ್ಕಾರವು ಸರ್ವೋಚ್ಚ ನ್ಯಾಯಾಲಯದಲ್ಲಿ ವಿಶೇಷ ಅನುಮತಿ ಅರ್ಜಿಯನ್ನು ಸಲ್ಲಿಸಿತು ಮತ್ತು ಸರ್ವೋಚ್ಚ ನ್ಯಾಯಾಲಯವು ಕೂಡ ವಿಶೇಷ ಅನುಮತಿ ಅರ್ಜಿಯನ್ನು ವಜಾ ಮಾಡಿರುವುದರಿಂದ;

ವಿಭಾಗೀಯ ನ್ಯಾಯಪೀಠವು, ಗ್ರಾಮೀಣ ವೈಟೇಜ್ ಆಗಿ ಶೇಕಡಾ 10 ರಷ್ಟು ಅಂಕಗಳನ್ನು ನೀಡುವುದು ಸ್ವೇಚ್ಛಾನುಸಾರವಾದುದೆಂದು ಮತ್ತು ಭಾರತ ಸಂವಿಧಾನದ 14,15 ಮತ್ತು 16ನೇ ಅನುಚ್ಛೇದಗಳ ಉಲ್ಲಂಘನೆಯಾಗುವುದೆಂದು ತೀರ್ಮಾನಿಸಿತು ಹಾಗೂ, ಈ ಮುಂದಿನಂತೆ ಅಭಿಪ್ರಾಯಪಟ್ಟಿರುವುದರಿಂದ, ಎಂದರೆ:

" ಗ್ರಾಮೀಣ ಪ್ರದೇಶಗಳಲ್ಲಿರುವ ಶಾಲೆಗಳು, ಅವುಗಳ ಶೈಕ್ಷಣಿಕ ಮಟ್ಟ, ಬೋಧನಾ ಪದ್ಧತಿ ಇತ್ಯಾದಿಗಳಿಗೆ ಸಂಬಂಧಪಟ್ಟಂತೆ ಯಾವುದೇ ತೌಲನಿಕ ಅಧ್ಯಯನ ನಡೆಸಿರುವ ಬಗ್ಗೆ ಯಾವುದೇ ವಿಷಯವನ್ನು ದಾಖಲೆಯ ಮೇಲೆ ರಾಜ್ಯವು ಮಂಡಿಸಿಲ್ಲ . ನಗರ ಪ್ರದೇಶಗಳಲ್ಲಿ ಗುಡಿಸಲು ನಿವಾಸಿಗಳ ಮತ್ತು ಆರ್ಥಿಕವಾಗಿ ಹಾಗೂ ಸಾಮಾಜಿಕವಾಗಿ ಹಿಂದುಳಿದ ವರ್ಗಗಳವರ ಮಕ್ಕಳ ಶಿಕ್ಷಣ ಮಟ್ಟವೂ ಕೂಡ ಗ್ರಾಮೀಣ ಪ್ರದೇಶಗಳ ಮಕ್ಕಳ ಶಿಕ್ಷಣ ಮಟ್ಟದಷ್ಟಾದರೂ ಇಲ್ಲವೆಂಬುದು ತಿಳಿದ ವಿಷಯವಾಗಿದೆ."

ಗ್ರಾಮೀಣ ಅಭ್ಯರ್ಥಿಗಳಿಗೆ ಸಂಬಂಧಪಡುವ ವಿವಿಧ ಅಂಶಗಳನ್ನು ಪರೀಕ್ಷಿಸುವದಕ್ಕಾಗಿ ಸರ್ಕಾರವು, ಉಚ್ಚ ನ್ಯಾಯಾಲಯದ ನಿವೃತ್ತ ನ್ಯಾಯಾಧೀಶರಾದ ನ್ಯಾಯಮೂರ್ತಿ

ಆರ್. ರಾಮಕೃಷ್ಣ  ಅವರ ಅಧ್ಯಕ್ಷತೆಯಲ್ಲಿ ಮತ್ತು ಇತರ ಕೆಲವು ಸದಸ್ಯರನ್ನೊಳಗೊಂಡ ಒಂದು ವಿಚಾರಣಾ ಆಯೋಗವನ್ನು ರಚಿಸಿದ್ದುದರಿಂದ;

ಆಯೋಗವು ತನ್ನ ವರದಿಯನ್ನು ಸಲ್ಲಿಸಿದ್ದು ಅದರಲ್ಲಿ ಈ ರೀತಿ ಅಭಿಪ್ರಾಯಪಟ್ಟಿದೆ. ಈಗ ಇರುವ ಶಾಲೆಗಳಲ್ಲಿ ದೊರೆಯುವ ಶಾಲಾ-ಶಿಕ್ಷಣ ಸೌಲಭ್ಯಗಳು ಮತ್ತು ಅದೇ ರೀತಿಯಾಗಿ ಮೂಲ ಸೌಲಭ್ಯಗಳು ಇವೆರಡನ್ನು ಗಮನಿಸಲಾಗಿ ಗ್ರಾಮೀಣ ಶಾಲೆಯಲ್ಲಿರುವ ಮಕ್ಕಳು ನಗರ ಪ್ರದೇಶದ ಶಾಲೆಗಳಲ್ಲಿರುವ ಮಕ್ಕಳಿಗೆ ಹೋಲಿಸಲಾಗಿ ತೀವ್ರ ಹಿನ್ನಡೆಯನ್ನು ಅನುಭವಿಸುತ್ತಿರುವುದು ಸ್ಪಷ್ಟವಾಗಿದೆ ಮತ್ತು ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳು ಮತ್ತು ಇತರ ಹಿಂದುಳಿದ ವರ್ಗಗಳಿಗೆ ಸೇರಿದ ವ್ಯಕ್ತಿಗಳಿಗೆ ಶೇಕಡಾ ಐವತ್ತರಷ್ಟರವರೆಗೆ ಈಗಾಗಲೆ ಒದಗಿಸಿರುವ ಮೀಸಲಾತಿಗೆ ಹೆಚ್ಚಿಗೆಯಾಗಿ ಶೇಕಡಾ 5 ರಷ್ಟು ಮತ್ತಷ್ಟು ಮೀಸಲಾತಿಯನ್ನು ಒದಗಿಸಲು ಶಾಸನವೊಂದನ್ನು ತರಲು ಅದು ಶಿಫಾರಸು ಮಾಡಿರುವುದರಿಂದ;

ಸರ್ವೋಚ್ಚ ನ್ಯಾಯಾಲಯವು, ಇಂದ್ರಸ್ವಾನಿ - ವಿರುದ್ಧ  - ಭಾರತ ಸರ್ಕಾರ ಮೊಕದ್ದಮೆಯಲ್ಲಿ, ಅನುಚ್ಛೇದ 16 (4)ರಲ್ಲಿ ವಿವರಿಸಿದ ಕೆಲವು ಅಸಾಧಾರಣಾ ಸನ್ನಿವೇಶಗಳನ್ನು ಹೊರತುಪಡಿಸಿ ಆ ಅನುಚ್ಛೇದದ ಅಡಿಯಲ್ಲಿ ಮೀಸಲಾತಿಯು,  ನೇಮಕಾತಿಗಳ ಅಥವಾ ಹುದ್ದೆಗಳ ಶೇಕಡಾ ಐವತ್ತರಷ್ಟನ್ನು ಮೀರತಕ್ಕದ್ದಲ್ಲವೆಂದು ತೀರ್ಮಾನಿಸಿರುವುದರಿಂದ;

ಮತ್ತು ಸರ್ಕಾರವು, ಮೇಲ್ಕಂಡ ವಿಷಯವನ್ನು ಜಾಗರೂಕತೆಯಿಂದ ಪರಿಶೀಲಿಸಿ ಅಧಿನಿಯಮದಲ್ಲಿ ಪರಿಭಾಷಿಸಿದಂತೆ ಜನರಲ್ ಮೆರಿಟ್‌ನ  ಪ್ರತಿಯೊಂದು ಪ್ರವರ್ಗಗಳಲ್ಲಿ, ಅನುಸೂಚಿತ ಜಾತಿ ಮತ್ತು ಅನುಸೂಚಿತ ಪಂಗಡಗಳ ಮತ್ತು ಇತರ ಹಿಂದುಳಿದ ವರ್ಗಗಳ ಪ್ರತಿಯೊಂದು ಪ್ರವರ್ಗಗಳಲ್ಲಿ ಎಲ್ಲಾ ನೇರ ನೇಮಕಾತಿ ಹುದ್ದೆಗಳ ಶೇಕಡಾ 10 ರಷ್ಟರವರೆಗೆ ಸಮಾಂತರ ಮೀಸಲಾತಿ ಒದಗಿಸತಕ್ಕದ್ದೆಂಬ ಕಾರ್ಯನೀತಿ ತೀರ್ಮಾನವನ್ನು ಕೈಗೊಂಡಿರುವುದರಿಂದ,

ಇದು ಭಾರತ ಗಣರಾಜ್ಯದ ಐವತ್ತೊಂದನೇ ವರ್ಷದಲ್ಲಿ ಈ ಮುಂದಿನಂತೆ ಅಧಿನಿಯಮಿತವಾಗಲಿ, ಎಂದರೆ:-

**1. ಸಂಕ್ಷಿಪ್ತ ಹೆಸರು ಮತ್ತು ಪ್ರಾರಂಭ.-** (1) ಈ ಅಧಿನಿಯಮವನ್ನು ಕರ್ನಾಟಕ ಗ್ರಾಮೀಣ ಅಭ್ಯರ್ಥಿಗಳಿಗಾಗಿ (ರಾಜ್ಯ ಸಿವಿಲ್ ಸೇವೆಗಳಲ್ಲಿ) ನೇಮಕಾತಿಗಳ ಅಥವಾ ಹುದ್ದೆಗಳ ಮೀಸಲಾತಿ ಅಧಿನಿಯಮ, 2000 ಎಂದು ಕರೆಯತಕ್ಕದ್ದು.

(2) ಇದು, ಸರ್ಕಾರವು ಅಧಿಸೂಚನೆಯ ಮೂಲಕ ಗೊತ್ತುಪಡಿಸಬಹುದಾದಂಥ [1][ದಿನಾಂಕದಿಂದ] ಜಾರಿಗೆ ಬರತಕ್ಕದ್ದು ಮತ್ತು ಈ ಅಧಿನಿಯಮದ ಬೇರೆ ಬೇರೆ ಉಪಬಂಧಗಳಿಗೆ ಬೇರೆ ಬೇರೆ ದಿನಾಂಕಗಳನ್ನು ಗೊತ್ತುಪಡಿಸಬಹುದು.

---

1. ಅಧಿನಿಯಮದ ಎಲ್ಲಾ ಉಪಬಂಧಗಳೂ ದಿನಾಂಕ 30-1-2001 ರಿಂದ ಜಾರಿಗೆ ಬಂದಿವೆ.  ಅಧಿಸೂಚನೆ ಸಂಖ್ಯೆ ಸಿಆಸುಇ 01 ಸೆನಸಿ 2000 (ಭಾಗ-3) ದಿನಾಂಕ 30-1-2001.

**2. ಪರಿಭಾಷೆಗಳು.-** ಈ ಅಧಿನಿಯಮದಲ್ಲಿ ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(1) " ಸರ್ಕಾರ " ಎಂದರೆ, ಕರ್ನಾಟಕ ಸರ್ಕಾರ.

(2) " ಗ್ರಾಮೀಣ ಅಭ್ಯರ್ಥಿ " ಎಂದರೆ,-

(i) ಒಂದು ಹುದ್ದೆಗಾಗಿ ನಿಯಮಿಸುಲಾದ ಅರ್ಹತಾ ಪರೀಕ್ಷೆಯು ಎಸ್.ಎಸ್.ಎಲ್.ಸಿ ಅಥವಾ ಉನ್ನತ ಪರೀಕ್ಷೆಯಾಗಿದ್ದಲ್ಲಿ 1ನೇ ತರಗತಿಯಿಂದ 10ನೇ ತರಗತಿಯವರೆಗೆ;

(ii) ಒಂದು ಹುದ್ದೆಗೆ ನಿಯಮಿಸಲಾದ ಅರ್ಹತಾ ಪರೀಕ್ಷೆಯು ಎಸ್.ಎಸ್.ಎಲ್.ಸಿ ಗಿಂತ ಕಡಿಮೆಯಾಗಿದ್ದಲ್ಲಿ, 1ನೇ ತರಗತಿಯಿಂದ ಅರ್ಹತಾ ಪರೀಕ್ಷೆಯವರೆಗೆ

-ಕರ್ನಾಟಕ ಪೌರನಿಗಮಗಳ ಅಧಿನಿಯಮ, 1976, ಅಥವಾ ಕರ್ನಾಟಕ ಪೌರಸಭೆಗಳ ಅಧಿನಿಯಮ, 1964ರ ಅಡಿಯಲ್ಲಿ ನಿರ್ದಿಷ್ಟಪಡಿಸಿದ ಒಂದು ದೊಡ್ಡನಗರ ಪ್ರದೇಶ, ಸಣ್ಣ ನಗರ ಪ್ರದೇಶ ಅಥವಾ ಪರಿವರ್ತನೆ ಹಂತದಲ್ಲಿರುವ ಪ್ರದೇಶಗಳ ಹೊರತಾಗಿ ಇತರ ಯಾವುದೇ ಪ್ರದೇಶದಲ್ಲಿರುವ ಶಾಲೆಯಲ್ಲಿ ವ್ಯಾಸಂಗ ಮಾಡಿದ ಅಭ್ಯರ್ಥಿ.

**3. ಗ್ರಾಮೀಣ ಅಭ್ಯರ್ಥಿಗಳಿಗಾಗಿ ನೇಮಕಾತಿಗಳ ಅಥವಾ ಹುದ್ದೆಗಳ ಮೀಸಲಾತಿ.-** ಯಾವುದೇ ನ್ಯಾಯಾಲಯ ಅಥವಾ ಇತರ ಪ್ರಾಧಿಕಾರದ ಯಾವುದೇ ತೀರ್ಪು, ಡಿಕ್ರಿ ಅಥವಾ ಆದೇಶದಲ್ಲಿ ಏನೇ ಒಳಗೊಂಡಿದ್ದರೂ, ನಗರ ಪ್ರದೇಶದ ಶಾಲೆಗಳಲ್ಲಿ ವ್ಯಾಸಂಗ ಮಾಡಿದ ಒಬ್ಬ ಅಭ್ಯರ್ಥಿಯನ್ನು ಗ್ರಾಮೀಣ ಶಾಲೆಗಳಲ್ಲಿ ವ್ಯಾಸಂಗ ಮಾಡಿದ ಒಬ್ಬ ಗ್ರಾಮೀಣ ಅಭ್ಯರ್ಥಿಯೊಡನೆ ಹೋಲಿಸಿದಲ್ಲಿ, ಅವನು ತೀವ್ರ ಹಿನ್ನಡೆಯನ್ನು ಅನುಭವಿಸುತ್ತಿರುವುದನ್ನು ಮತ್ತು ರಾಜ್ಯದ ಸಿವಿಲ್ ಸೇವೆಗಳಲ್ಲಿ ಗ್ರಾಮೀಣ ಅಭ್ಯರ್ಥಿಗಳ ಪ್ರಾತಿನಿಧ್ಯವು ಸಾಕಷ್ಟಿಲ್ಲದಿರುವುದನ್ನು ಗಮನಿಸಿ ಜನರಲ್ ಮೆರಿಟ್ ಹಾಗೂ ಅನುಸೂಚಿತ ಜಾತಿಗಳ ಮತ್ತು ಅನುಸೂಚಿತ ಪಂಗಡಗಳ ಪ್ರತಿಯೊಂದು ಪ್ರವರ್ಗಗಳಲ್ಲಿ ಮತ್ತು ಇತರ ಹಿಂದುಳಿದ ವರ್ಗಗಳ ಪ್ರತಿಯೊಂದು ಪ್ರವರ್ಗದಲ್ಲಿ ನೇರ ನೇಮಕಾತಿಗಾಗಿ ಕಾಯ್ದಿರಿಸಿದ ಖಾಲಿ ಸ್ಥಾನಗಳ ಶೇಕಡಾ ಇಪ್ಪತ್ತೈದು ಗ್ರಾಮೀಣ ಅಭ್ಯರ್ಥಿಗಳಿಗಾಗಿ ಮೀಸಲಿಡತಕ್ಕದ್ದು:

ಪರಂತು, ಜನರಲ್ ಮೆರಿಟ್ ಅಥವಾ 1ನೇ ಪ್ರವರ್ಗವನ್ನು ಹೊರತುಪಡಿಸಿದಂತೆ ಇತರೆ ಹಿಂದುಳಿದ ವರ್ಗಗಳಿಗೆ ಸೇರಿದ ಗ್ರಾಮೀಣ ಅಭ್ಯರ್ಥಿಗಳ ಸಂದರ್ಭದಲ್ಲಿ, ಸಂವಿಧಾನದ 16ನೇ ಅನುಚ್ಛೇದದ (4)ನೇ ಖಂಡದ ಅಡಿಯಲ್ಲಿ ಹೊರಡಿಸಲಾದ ಮೀಸಲಾತಿಗೆ ಸಂಬಂಧಿಸಿದ ಸರ್ಕಾರದ ಆದೇಶಗಳ ಪ್ರಕಾರ ಮೇಲುಸ್ತರದ ಪರಿಕಲ್ಪನೆಯು (ಕ್ರೀಮಿ ಲೇಯರ್) ಯಥೋಚಿತ ವ್ಯತ್ಯಾಸಗಳೊಂದಿಗೆ ಅನ್ವಯವಾಗತಕ್ಕದ್ದು.

**4. ನಿಯಮಗಳ ರಚನಾಧಿಕಾರ.-** (1) ರಾಜ್ಯ ಸರ್ಕಾರವು, ಅಧಿಸೂಚನೆಯ ಮೂಲಕ ಪೂರ್ವ ಪ್ರಕಟಣೆಯು ತರುವಾಯ ಈ ಅಧಿನಿಯುಮದ ಉದ್ದೇಶಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ನಿಯಮಗಳನ್ನು ರಚಿಸಬಹುದು.

(2) ಈ ಅಧಿನಿಯಮದ ಮೇರೆಗೆ ರಚಿತವಾತ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ನಂತರ ಆದಷ್ಟು ಬೇಗನೆ ರಾಜ್ಯ ವಿಧಾನ ಮಂಡಲದ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ ಒಂದು ಅಧಿವೇಶನದಲ್ಲಿ ಅಥವಾ ಒಂದಾದ ಮೇಲೊಂದು ಬರುವ ಎರಡು ಅಥವಾ ಹೆಚ್ಚು ನಿರಂತರ ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಮೂವತ್ತು ದಿನಗಳ ಅವಧಿಯವರೆಗೆ ಮಂಡಿಸತಕ್ಕದ್ದು ಮತ್ತು ಅದನ್ನು ಹಾಗೆ ಮಂಡಿಸಲಾದ ಅಧಿವೇಶನವು ಅಥವಾ ಅದರ ನಿಕಟ ತರುವಾಯದ ಅಧಿವೇಶನವು ಮುಗಿಯುವ ಮುಂಚೆ, ಆ ನಿಯಮದಲ್ಲಿ ಯಾವುದೇ ಮಾರ್ಪಾಟನ್ನು ಮಾಡಲು ಎರಡೂ ಸದನಗಳು ಒಪ್ಪಿದರೆ ಅಥವಾ ಆ ನಿಯಮವನ್ನು ಮಾಡಕೂಡದೆಂದು ಎರಡೂ ಸದನಗಳು ಒಪ್ಪಿದರೆ, ಸಂದರ್ಭಾನುಸಾರ, ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ, ಆದರೆ ಅಂಥ ಯಾವುದೇ ಮಾರ್ಪಾಟು ಅಥವಾ ಶೂನ್ಯತೆಯು, ಆ ನಿಯಮದ ಮೇರೆಗೆ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವಾಗದಂತೆ ಇರತಕ್ಕದ್ದು.

**5. ತೊಂದರೆಗಳನ್ನು ನಿವಾರಿಸಲು ಅಧಿಕಾರ.-** (1) ಈ ಅಧಿನಿಯಮದ ಉಪಬಂಧಗಳನ್ನು ಕಾರ್ಯಗತಗೊಳಿಸುವಲ್ಲಿ ಯಾವುದೇ ತೊಂದರೆಯು ಉದ್ಭವಿಸಿದರೆ, ರಾಜ್ಯ ಸರ್ಕಾರವು ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಲ್ಲದ ಮತ್ತು ಆ ತೊಂದರೆಗಳನ್ನು ನಿವಾರಿಸುವುದಕ್ಕಾಗಿ ಅವಶ್ಯವೆಂದು ಅಥವಾ ವಿಹಿತವೆಂದು ತನಗೆ ಕಂಡುಬಂದ ಉಪಬಂಧಗಳನ್ನು ಆದೇಶದ ಮೂಲಕ ಸರ್ಕಾರಿ ರಾಜ್ಯ ಪತ್ರದಲ್ಲಿ ಪ್ರಕಟಿಸುವುದರೊಂದಿಗೆ ಮಾಡಬಹುದು:

ಪರಂತು, ಈ ಅಧಿನಿಯಮವು ಪ್ರಾರಂಭವಾದ ದಿನಾಂಕದಿಂದ ಎರಡು ವರ್ಷಗಳು ಮುಕ್ತಾಯವಾದ ತರುವಾಯ ಅಂಥ ಆದೇಶವನ್ನು ಹೊರಡಿಸತಕ್ಕದ್ದಲ್ಲ.

(2) ಈ ಪ್ರಕರಣದ ಅಡಿಯಲ್ಲಿ ಮಾಡಿದ ಪ್ರತಿಯೊಂದು ಆದೇಶವನ್ನು , ಅದನ್ನು ಮಾಡಿದ ತರುವಾಯ ಸಾಧ್ಯವಾದಷ್ಟು ಬೇಗನೆ, ರಾಜ್ಯ ವಿಧಾನ ಮಂಡಲದ ಪ್ರತಿಯೊಂದು ಸದನದ ಮುಂದೆ ಮಂಡಿಸತಕ್ಕದ್ದು.